

# ಬೆಳ್ಳಿತೆರೆಯಲ್ಲಿ ರಿತನ್ಯಾ ರುಜು

■ ಸುಮಲತಾ ಎನ್.

◆ **‘ಜವರ’ ಸಿನಿಮಾ ಮೂಲಕ ಕನ್ನಡ ಸಿನಿಮಾರಂಗದಲ್ಲಿ ನಾಯಕನಟಿಯಾಗಿ ಪರಿಚಿತಗೊಳ್ಳುತ್ತಿದ್ದೀರಿ. ಹೇಗನ್ನಿಸುತ್ತಿದೆ?**

‘ಲ್ಯಾಂಡ್‌ಲಾರ್ಡ್’ ಸಿನಿಮಾದಲ್ಲಿ ಒಂದು ಪಾತ್ರದ ಮೂಲಕ ಪರಿಚಿತಳಾಗಿದ್ದೆ. ಈಗ ನಾಯಕಿಯಾಗಿ ಸಿನಿಮಾರಂಗಕ್ಕೆ ಕಾಲಿಡುತ್ತಿರುವುದು ಸಂತೋಷವಾಗುತ್ತಿದೆ. ‘ಲ್ಯಾಂಡ್‌ಲಾರ್ಡ್’ ಹಾಗೂ ‘ಜವರ’ ಸಿನಿಮಾಗಳಲ್ಲಿ ಅತ್ಯುತ್ತಮ ಪಾತ್ರಗಳನ್ನು ನಿರ್ವಹಿಸುತ್ತಿರುವ ಸಾರ್ಥಕತೆಯೂ ಇದೆ.

◆ **‘ಲ್ಯಾಂಡ್‌ಲಾರ್ಡ್’ ಸಿನಿಮಾದಲ್ಲಿ ತೆರೆ ಮೇಲೂ ಅಪ್ಪ–ಮಗಳ ಪಾತ್ರ ನಿರ್ವಹಿಸಿದ ಅನುಭವ?**

ತುಂಬಾ ವಿಶೇಷ ಅನುಭವ ಅದು. ‘ಲ್ಯಾಂಡ್‌ಲಾರ್ಡ್’ನಲ್ಲಿ ನನ್ನ ಪಾತ್ರ ವಿಶಿಷ್ಟವಾಗಿದೆ. ಸೆಟ್‌ನಲ್ಲಿ ನಾವು ಪಾತ್ರಗಳಾಗಿಯೇ ಇರುತ್ತಿದ್ದೆವು. ರಾಚಯ್ಯ ಹಾಗೂ ಭಾಗ್ಯ ಪಾತ್ರದಲ್ಲೇ ನಮ್ಮನ್ನು ನಾವು ಸಂಪೂರ್ಣ ತೊಡಗಿಸಿಕೊಂಡಿದ್ದೆವು. ಚಿತ್ರೀಕರಣದ ಬಿಡುವಿನಲ್ಲಿಯೂ ಸಿನಿಮಾದ್ದೇ ಚರ್ಚೆ ಮಾಡುತ್ತಿದ್ದೆವು. ನನ್ನ ಮೊದಲ ಸಿನಿಮಾದಲ್ಲಿ ನನ್ನ ಅಪ್ಪನೊಂದಿಗೆ ನಟಿಸಿದ್ದು ಅದೃಷ್ಟ.

◆ **ಸಿನಿಮಾರಂಗಕ್ಕೆ ಕಾಲಿಡುವ ನಿರ್ಧಾರ ಮಾಡಿದಾಗ ನಿಮ್ಮ ತಂದೆಯಿಂದ ಬಂದ ಸಲಹೆಗಳು?**

ಸಿನಿಮಾ ವಾತಾವರಣದಲ್ಲೇ ಬೆಳೆದಿದ್ದು ನಾವು. ಮನೆಯಲ್ಲಿಯೂ ಸಿನಿಮಾದ್ದೇ ಚರ್ಚೆ. ಅಪ್ಪನ ಜೊತೆಗೆ ಚಿತ್ರೀಕರಣದ ಸೆಟ್‌ಗಳಿಗೂ ಹೋಗುತ್ತಿದ್ದೆವು. ಹೀಗಾಗಿ ಸಿನಿಮಾರಂಗಕ್ಕೆ ಬರಬೇಕೆಂಬ ಆಸೆ ಮನಸ್ಸಿನಲ್ಲಿ ಇದ್ದೇ ಇತ್ತು. ಮನೆಯಲ್ಲಿ ಹೇಳಿಕೊಳ್ಳಲು ಭಯ ಇತ್ತು. ಮೊದಲು ಶಿಕ್ಷಣ ಮುಗಿಸಬೇಕು ಎಂಬುದು ಅಪ್ಪನ

## ಸ್ವವಿಮರ್ಶೆಯಲ್ಲಿ ಶರಣ್ಯ ಶೆಟ್ಟಿ



‘ಕೃಷ್ಣಂ ಪ್ರಣಯ ಸಖಿ’ ಸಿನಿಮಾದಲ್ಲಿ ಮಿಂಚಿದ್ದ ನಟಿ ಶರಣ್ಯ ಶೆಟ್ಟಿ, ‘ಕೌಂತೇಯ’ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ.

ನಟ ಅಚ್ಯುತ್ ಕುಮಾರ್ ಅವರೊಂದಿಗೆ ಈ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಸಿನಿಮಾಗಳಲ್ಲಿ ನಟಿಸಲು ‘ಪ್ರಮುಖ’ ಅಥವಾ ‘ಪೋಷಕ ಪಾತ್ರ’ ಎನ್ನುವ ಲೇಬಲ್‌ಗಿಂತ ಪಾತ್ರದ ಗಟ್ಟಿತನ ಬಹಳ ಮುಖ್ಯ ಎಂಬ ಮಾತನ್ನು ಹೇಳಿದ್ದಾರೆ. ತಮ್ಮ ಕರಿಯರ್‌ನಲ್ಲಿ ಹೀಗೆ ಯೋಚಿಸುತ್ತಿರುವ ಹಂತದಲ್ಲಿ ತಾವಿರುವುದಾಗಿ ಶರಣ್ಯ ಹೇಳಿಕೊಂಡಿದ್ದಾರೆ. ಈಚೆಗೆ ಬದಲಾಗುತ್ತಿರುವ ಸಿನಿಮಾ ವ್ಯಾಕರಣದ ಕುರಿತೂ ಮಾತನಾಡಿದ್ದಾರೆ.

‘ಈಗ ಫಿಲ್ಮ್ ಮೇಕರ್‌ಗಳು ಪ್ರಮುಖ ಪಾತ್ರ ಎಂಬ ಪರಿಕಲ್ಪನೆಯನ್ನಿಟ್ಟುಕೊಂಡು ಸಿನಿಮಾ ಹೆಣೆಯುತ್ತಿಲ್ಲ. ಪ್ರತಿ ಪಾತ್ರವನ್ನೂ ಬಲಿಷ್ಠವಾಗಿ ರೂಪಿಸುತ್ತಿದ್ದಾರೆ’ ಎನ್ನುತ್ತಲೇ, ‘ಕೌಂತೇಯ’ ಸಿನಿಮಾ ಕಥೆಯಲ್ಲಿ ತಮ್ಮ ಪಾತ್ರಕ್ಕಿರುವ ಪ್ರಾಮುಖ್ಯವೇ ತಮ್ಮನ್ನು ಈ ಸಿನಿಮಾದೆಡೆಗೆ ಸೆಳೆದ ಅಂಶ ಎಂದು ಹೇಳಿಕೊಂಡಿದ್ದಾರೆ. ‘ಈ ಸಿನಿಮಾ ಭಾಗವಾಗಿರುವುದಕ್ಕೆ ಬಹಳ ಖುಷಿಯಿದೆ. ಈ ಕಥಾ ಎಳೆಗೆ ನನ್ನ ಪಾತ್ರ ದೊಡ್ಡ ಪ್ರಭಾವ ಬೀರಲಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ಸಿನಿಮಾದ ವಸ್ತುವಿಷಯ ಹಾಗೂ ವಾಸ್ತವಕ್ಕೆ ಹತ್ತಿರವಾದ ಪಾತ್ರಗಳೆಡೆಗೆ ನನ್ನ ಮನಸ್ಸು ವಾಲುತ್ತಿದೆ. ನಾನು ಕೇಂದ್ರಬಿಂದು ಆಗಬೇಕೆಂಬುದಿಲ್ಲ. ಪ್ರಭಾವಶಾಲಿ ಪಾತ್ರಗಳತ್ತ ದೃಷ್ಟಿ ನೆಟ್ಟಿದ್ದೇನೆ. ಸ್ಕ್ರೀನ್ ಟೈಂಗಿಂತ ಪಾತ್ರದ ಆಳ ನನ್ನನ್ನು ಸೆಳೆಯುವ ಅಂಶ. ಸ್ಕ್ರೀನ್ ಮೇಲೆ ಚೆನ್ನಾಗಿ ಕಾಣುವುದಷ್ಟೇ ಅಲ್ಲ, ಪರ್ಫಾರ್ಮೆನ್ಸ್‌ನಿಂದಲೂ ಗಮನಸೆಳೆಯಬೇಕಿದೆ’ ಎಂದು ವಿಮರ್ಶೆ ಮಾಡಿಕೊಂಡಿದ್ದಾರೆ. ■